8. ಗಮನ ಸೆಳೆಯುವ ಸೂಚನೆಗಳು

1. ವಿಷಯ:-ರಾಜ್ಯದಲ್ಲಿ ಕೃಷಿ ಪರಿಕರಗಳ ವಿತರಣೆಯಲ್ಲಿ ಸಹಾಯಧನದ ಅವ್ಯವಸ್ಥೆ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):-ಮಾನ್ಯ ಉಪಾಧ್ಯಕ್ಷರೆ :-ರಾಜ್ಯದಲ್ಲಿ ಕೃಷಿ ಪರಿಕರಗಳ ವಿತರಣೆಯಲ್ಲಿ ಸಹಾಯಧನದ ಅವ್ಯವಸ್ಥೆ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ರೈತರಿಗೆ ಇಲಾಖೆಯ ವಿವಿಧ ಯೋಜನೆಗಳಡಿ ರಿಯಾಯಿತಿ ದರದಲ್ಲಿ ಕೃಷಿ ಪರಿಕರಗಳಾದ ಬಿತ್ತನೆ ಬೀಜ, ಸಾವಯವ/ ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸುವ ಕಾರ್ಯಕ್ರಮ ಇರುತ್ತದೆ. ರಿಯಾಯಿತಿ ಯೋಜನೆಗಳಡಿ ಕೃಷಿ ಪರಿಕರಗಳನ್ನು ಪೂರೈಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ಟೆಂಡರುಗಳನ್ನು ಕರೆದು ಟೆಂಡರ್ ಪರಿಶೀಲನಾ ಸಮಿತಿಯು ಟೆಂಡರುಗಳನ್ನು ಪರಿಶೀಲಿಸಿ. ಕೃಷಿ ಪರಿಕರ ಸರಬರಾಜುದಾರರನ್ನು ಆಯ್ಕೆ ಮಾಡಲಾಗುವುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999 ರ ಕಂಡಿಕೆ 25 ರನ್ವಯ ಕನಿಷ್ಟ ದರ (L1) ಗಳನ್ನು ಪರಿಗಣಿಸಲಾಗುತ್ತಿದೆ.

ಟೆಂಡರ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಬೆಳೆವಾರು ತಳಿಗಳ ಬಿತ್ತನೆ ಬೀಜ ಮಾರಾಟ ದರಗಳನ್ನು ನಿಗದಿಪಡಿಸಲು ಡಾ: ಆರ್.ಆರ್. ಹಂಚಿನಾಳ್, ಕುಲಪತಿಗಳು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ರವರ ನೇತೃತ್ವದ ಸಮಿತಿ ಮತ್ತು ಇತರೆ ಪರಿಕರಗಳಿಗೆ ದರಗಳನ್ನು ನಿಗಧಿಪಡಿಸಲು ಡಾ: ಬಿ.ವಿ.-ಪಾಟೀಲ್, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು ರವರ ನೇತೃತ್ವದ ಸಮಿತಿಯಲ್ಲಿ ಪ್ರತಿಯೊಂದು ಸರಬರಾಜುದಾರ ಸಂಸ್ಥೆಗಳೊಂದಿಗೆ ಚರ್ಚಿಸಿ. ಸರಬರಾಜುದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರ, ಹಿಂದಿನ ಸಾಲಿನಲ್ಲಿ ಸದರಿ ಪರಿಕರಗಳನ್ನು ಸರಬರಾಜು ಮಾಡಿದ್ದಲ್ಲಿ ಅದರ ಮಾರಾಟ

ದರ ಹಾಗೂ ಮಾರುಕಟ್ಟೆಯ ದರ ಇತ್ಯಾದಿಗಳನ್ನು ಪರಿಗಣಿಸಿ ದರ ನಿಗದಿಪಡಿಸಲಾಗುವುದು.

ಬಿತ್ತನೆ ಬೀಜಗಳ ದರ ನಿಗಧಿ ಕುರಿತಂತೆ ಪ್ರತಿ ಬೆಳೆಯಲ್ಲೂ L1 ದರವನ್ನು ಪರಿಗಣಿಸಿ ಬೆಳೆವಾರು ನೀಡಬಹುದಾದ ರಿಯಾಯಿತಿ ದರವನ್ನು ತಳಿ/ ಸಂಕರ ತಳಿಗಳಿಗೆ ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು. ಮುಕ್ತ ಮಾರುಕಟ್ಟೆಯಲ್ಲಿನ ವಾಣಿಜ್ಯ ಉತ್ಪನ್ನದ ದರಕ್ಕಿಂತ ರಿಯಾಯಿತಿ ಯೋಜನೆ–ಯಡಿ ವಿತರಣೆ ಮಾಡಲಾಗುವ ಬಿತ್ತನೆ ಬೀಜಗಳ ದರವು ಕಡಿಮೆಯಾಗಬಾ–ರದೆಂಬ ಮುಖ್ಯ ಉದ್ದೇಶದಿಂದ ರಿಯಾಯಿತಿ ದರವನ್ನು ವಿವಿಧ ಬೆಳೆಗಳಲ್ಲಿ ಐ1 ದರದ ಆಧಾರದ ಮೇರೆಗೆ ನಿತಗದಿಪಡಿಸಲಾಗುವುದು.

ವಿವಿಧ ಬೆಳೆಗಳಿಗೆ L1 ದರದ ಆಧಾರದ ಮೇರೆಗೆ ಬೆಳೆವಾರು ರಿಯಾಯಿತಿ ನಿಗದಿಪಡಿಸುವುದರಿಂದ, ರೈತರು ಪಡೆಯುವ ಒಂದೇ ಬೆಳೆಯ ವಿವಿಧ ತಳಿ/ ಸಂಕುರ ತಳಿಗಳಿಗೆ ಪ್ರತಿ ರೈತರಿಗೂ ಸಮನಾದ ರಿಯಾಯಿತಿ ನೀಡಿದಂತಾಗುತ್ತದೆ.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಇತರೆ ಕೃಷಿ ಇಲಾಖೆ ಸಿಬ್ಬಂದಿಯವರ ಜೊತೆ ಚರ್ಚಿಸಿ ಆಯಾ ಪ್ರದೇಶಕ್ಕೆ ಸೂಕ್ತವಾದ ಬೆಳೆ/ತಳಿಗಳನ್ನು ಗಮನಿಸಿ ಬಿತ್ತನೆ ಬೀಜ ಪೂರೈಕೆಗೆ ವ್ಯವಸ್ಥೆ ಮಾಡುತ್ತಾರೆ.

ಅನುಮೋದಿತ ಸಂಸ್ಥೆಗಳಿಂದ ಬಿತ್ತನೆ ಬೀಜಗಳನ್ನು Consignment ಆಧಾರದ ಮೇರೆಗೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮುಖಾಂ–ತರ ರೈತರಿಗೆ ರಿಯಾಯಿತಿ ದರದಲ್ಲಿ ವಿತರಣೆಗೆ ದೊರಕಿಸಲಾಗುವುದು. ಮಾರಾಟವಾಗದೆ ಉಳಿದ ಬಿತ್ತನೆ ಬೀಜಗಳನ್ನು ಸಂಬಂಧಪಟ್ಟ ಸಂಸ್ಥೆಗಳು ಹಿಂದಕ್ಕೆ ಪಡೆಯುತ್ತಾರೆ. ಬೀಜ ವಿತರಿಸಲು ಹೆಚ್ಚುವರಿ ಮಾರಾಟ ಕೇಂದ್ರಗಳ ಅವಶ್ಯಕತೆ ಕಂಡು ಬಂದಲ್ಲಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮಾರಾಟ ಕೇಂದ್ರಗಳ ಮೂಲಕವು ಸಹ ವಿತರಣೆಗೆ ವ್ಯವಸ್ಥೆ ಮಾಡಲಾಗುವುದು. ರೈತರು ಸ್ವಇಚ್ಛೆಯಿಂದ ತಮಗೆ ಬೇಕಾದ ಅನುಮೋದಿತ ತಳಿಗಳನ್ನು ರಿಯಾಯಿತಿ ದರಗಳಲ್ಲಿ ಪಡೆಯುವ ವ್ಯವಸ್ಥೆಯನ್ನು ಕೃಷಿ ಇಲಾಖೆ ವತಿಯಿಂದ ಕಲ್ಪಿಸಲಾಗುತ್ತದೆ.

ಜೈವಿಕ ಗೊಬ್ಬರಗಳು, ಜಿಪ್ಸಂ, ಸತುವಿನ ಸುಲ್ಫೇಟ್, ಬೋರಾಕ್ಸ್, ಹಸಿರೆಲೆ ಗೊಬ್ಬರಗಳು, ಲಘು ಪೋಷಕಾಂಶ ವಿಶ್ರಣಗಳು, ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್, ಕೃಷಿ ಸುಣ್ಣ, ಡೋಲೋಮೈಟ್ ಮತ್ತು ಸಸ್ಯ ಸಂರಕ್ಷಣಾ ಔಷಧಿ ಪರಿಕರಗಳನ್ನು ರೈತರಿಗೆ ಸರಬರಾಜು ಮಾಡಲು ಜಿಲ್ಲೆಗಳಿಗೆ ಅವಶ್ಯವಿರುವ ಕೃಷಿ ಪರಿಕರಗಳನ್ನು ದರ ಕರಾರಿನಡಿ ಅನುಮೋದಿತ ಸರಬರಾಜುದಾರರಿಗೆ ಬೇಡಿಕೆ ಸಲ್ಲಿಸಿ ಸರಬರಾಜು ಪಡೆದು ವಿವಿಧ ಯೋಜನೆಗಳಡಿಯಲ್ಲಿ ಇಲಾಖೆಯಿಂದ ಬಿಡುಗಡೆಯಾಗುವ ಅನುದಾನವನ್ನು ಬಳಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ವಿತರಣೆಯಾಗುತ್ತಿರುವ ವಿವಿಧ ಶ್ರೇಣಿಯ ರಸಗೊಬ್ಬರಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಸಹಾಯಧನ ನೀಡಲಾಗುತ್ತಿಲ್ಲ.

ಕೃಷಿ ಯಾಂತ್ರೀಕರಣ ಕಾರ್ಯಕ್ರಮವನ್ನು ಕೃಷಿ ಇಲಾಖೆಯಲ್ಲಿ ಹೆಚ್ಚಿನ ಒತ್ತುಕೊಟ್ಟು ಮೇಲೆ ತಿಳಿಸಿರುವ ವಿಧಾನದಲ್ಲಿಯೇ ಇ-ಟೆಂಡರ್ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಸರ್ಕಾರದಿಂದ ನೇಮಿಸಿರುವ ಡಾ. ಬಿ.ವಿ. ಪಾಟೀಲ್, ಕುಲಪತಿಗಳು, ರಾಯಚೂರು, ಇವರ ಅಧ್ಯಕ್ಷತೆಯ ತಾಂತ್ರಿಕ ಸಲಹಾ ಸಮಿತಿಯು ದರಗಳು ಹಾಗೂ ಮಾದರಿಗಳ Specifications ಗಳನ್ನು ಪರಿಶೀಲಿಸಿ ಹೊರ ರಾಜ್ಯಗಳ ದರಗಳಿಗೂ ಹೋಲಿಕೆ ಮಾಡಿ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ದರ ಪರಿಷ್ಕರಣೆ ಮಾಡಿ ಅಂತಿಮವಾಗಿ ಸ್ಪರ್ಧಾತ್ಮಕ ದರ ನಿಗದಿಪಡಿಸಿ ಅವುಗಳ ದರಪಟ್ಟಿಯನ್ನು ಉಪಕರಣವಾರು, ಸಂಸ್ಥೆವಾರು, ಮಾದರಿವಾರು ಪಟ್ಟಿ ಮಾಡಿ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಕಳುಹಿಸಲಾಗಿದೆ ಹಾಗೂ ಜಿಲ್ಲಾವಾರು ರೈತರ ಇಚ್ಚಾನುಸಾರ ಬೇಡಿಕೆ ಆಧರಿಸಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ. ಮುಂದುವರೆದು, ರೈತರಲ್ಲಿ ಪ್ರಚಲಿತವಿರುವ ಕೃಷಿ ಯಂತ್ರೋಪಕರಣಗಳ ಬೇಡಿಕೆ ವಿವರಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಂದ ಪಡೆದು, ಅನುದಾನ ಲಭ್ಯತೆ ಆಧರಿಸಿ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ಸರ್ಕಾರದ ಆದೇಶದನ್ವಯ ಈ ಕೆಳಕಂಡಂತೆ ಸಹಾಯಧನವನ್ನು ಪಾವತಿಸಲು ಅವಕಾಶ ನೀಡಲಾಗಿರುತ್ತದೆ.

1. ರೈತರು ಉಪಕರಣದ ಪೂರ್ಣ ಮೊತ್ತ ಪಾವತಿಸಿದಲ್ಲಿ ನೇರವಾಗಿ ರೈತರಿಗೆ ಸಹಾಯಧನ ಪಾವತಿಸುವುದು.

2. ರೈತರು ಉಪಕರಣಪಡೆಯಲು ಬ್ಯಾಂಕ್ ಸಾಲ ಮಾಡಿದ್ದಲ್ಲಿ. ಸಾಲ ನೀಡಿದ ಬ್ಯಾಂಕ್ ಖಾತೆಗೆ ಸಹಾಯಧನವನ್ನು ಜಮೆ ಮಾಡುವುದು.

3. ರೈತರ ವಂತಿಕೆಯನ್ನು ಮಾತ್ರ ಪಾವತಿಸಿ ಉಪಕರಣವನ್ನು ಖರೀದಿಸಿದಲ್ಲಿ ಸಹಾಯಧನವನ್ನು ಸಂಬಂಧಪಟ್ಟ ಸಂಸ್ಥೆಗೆ ನೀಡುವುದು.

ರಾಜ್ಯದಲ್ಲಿ ವಿವಿಧ ಯೋಜನೆಗಳಡಿ ರೈತರಿಗೆ ಕೃಷಿ ಪರಿಕರಗಳನ್ನು ಸಹಾಯ ಧನದಲ್ಲಿ ವಿತರಿಸಲು ದರ ಕರಾರು ನಿಗದಿ ಪಡಿಸಲಾಗಿದೆ. ದರ ಕರಾರಿನಲ್ಲಿರುವ ವಿವಿಧ ಪರಿಕರಗಳಿಗೆ ಸ್ಥಳೀಯ ಬೇಡಿಕೆಗನುಗುಣವಾಗಿ ಬೇಡಿಕೆ ಸಲ್ಲಿಸಿ, ಅಗತ್ಯತೆ ಮೇರೆಗೆ ವ್ಯವಸ್ಥಿತವಾಗಿ ಕೃಷಿ ಪರಿಕರಗಳನ್ನು ವಿತರಿಸಲಾಗುತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಕೃಷಿ ಸಚಿವರು ಹೇಳಿದ ವಿಚಾರದ ಬಗ್ಗೆ ಹೇಳುವುದಾದರೆ ಬಿತ್ತನೆ ಬೀಜದ ಬಗ್ಗೆ ನಾನು ಈಗಾಗಲೇ ಹಿಂದೆ ಒಂದು ಸಾರಿ ಸದನದಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೆನು. ಆಗ ಮಾನ್ಯ ಸಚಿವರು ಶಿವಲಿಂಗೇಗೌಡರನ್ನು ಸೇರಿಸಿ ಅಧಿಕಾರಿಗಳ ಜೊತೆಯಲ್ಲಿ ಒಂದು ಸಭೆಯನ್ನು ಮಾಡಿ ಸಬ್ಸಿಡಿ ದರದಲ್ಲಿ ಆಗಿರುವಂತಹ ವ್ಯತ್ಯಾಸವನ್ನು ಸರಿಪಡಿಸುತ್ತೇನೆಂದು ಹೇಳಿದ್ದರು. ಆದರೆ ಆ ಸಭೆ ನಡೆಯಲಿಲ್ಲ. ಅವತ್ತು ಈ ವಿಚಾರದ ಬಗ್ಗೆ ಚರ್ಚೆ ಮಾಡಿದಾಗ ಅವರು ಎಲ್ಲರನ್ನು ಸೇರಿಸಿ, ತಜ್ಞರನ್ನು ಕರೆಸಿ ಸಭೆ ಮಾಡುತ್ತೇನೆಂದು ಸದನದಲ್ಲಿ ಒಪ್ಪಿಕೊಂಡಿದ್ದರು. ಇದರ ಬಗ್ಗೆ ಪುನ: ಚರ್ಚೆ ಮಾಡಬೇಕೇ? ಇಲ್ಲವೆಂದರೆ ಏನಾದರೂ ಸಮಿತಿ ಸಭೆ ಕರೆದು ದಿನಾಂಕವನ್ನು ನಿಗದಿಪಡಿಸಿ ಅದರಲ್ಲಿ ಆಗಿರುವಂತಹ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಲಿಂಗೇ ಗೌಡರು ಇವತ್ತು ಇರುವ ಹಾಗೆ ಅವತ್ತು ಇರಲಿಲ್ಲ. ಅಂದು ಆವೇಶಭರಿತರಾಗಿ ಏನೂ ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಯಾವುದೇ ತೀರ್ಮಾನಗಳೂ ಕೂಡ ಆಗಲಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನೀವು ಸಭೆ ಕರೆದು ಮಾಡುತ್ತೇವೆನ್ನುವ ಕಾರಣಕ್ಕೆ ನಾವು ಸುಮ್ಮನಾದೆವು.

ಶ್ರೀ ಉಮೇಶ್ ವಿ. ಕತ್ತಿ :- ಇವತ್ತು ಮಾನ್ಯ ಶಿವಲಿಂಗೇಗೌಡರು ಬಹಳ ಒಳ್ಳೆಯ ಶಾಸಕನಾಗಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಆದಷ್ಟು ಬೇಗ ೮-೧೦ ದಿವಸಗಳಲ್ಲಿ ಒಂದು ಸಭೆಯನ್ನು ಮಾಡಿ, ಅವರ ಎದುರಿಗೆ ವಿಜ್ಞಾನಿಗಳನ್ನು ಹಾಗೂ ಕುಲಪತಿಗಳನ್ನು ಕರೆದು ಚರ್ಚಿಸಿ ಇದಕ್ಕೆ ಅಂತಿಮ ರೂಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಇದು ಸುಳ್ಳಾಗಬಾರದು, ಏಕೆಂದರೆ ಇದು ಎರಡನೇ ಬಾರಿ ಹೇಳುತ್ತಿರುವುದು.

ಶ್ರೀ ಉಮೇಶ್ ವಿ. ಕತ್ತಿ :- ಅವತ್ತು ತೀರ್ಮಾನವಾಗಿರಲಿಲ್ಲ, ಇವತ್ತು ತೀರ್ಮಾನವಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಾನು ರಾಣೆಬೆನ್ನೂರಿಗೆ ಬೀಜಗಳನ್ನು ಉತ್ಪತ್ತಿ ಮಾಡುವಂತಹ ಜಾಗಕ್ಕೆ ಹೋಗಿ ಅಲ್ಲಿ ರೈತರಿಗೆ ಆಗುತ್ತಿರುವಂತಹ ಅನ್ಯಾಯವನ್ನು ಸ್ವತಃ ಕಂಡುಹಿಡಿದು ಅಕ್ಷರಶ: ತಮ್ಮ ಮುಂದೆ ಇಡುತ್ತೇನೆ. ಅಂದು ನಾನು ಇಟ್ಟಿದ್ದೆ. ನೀವು ಏನು ಹೇಳಿದಿರಿ, ಸ್ವಲ್ಪ ದಿನದಲ್ಲಿ ಕರೆದು ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ. ಆದರೆ ನೀವು ತೀರ್ಮಾನ ತೆಗೆದುಕೊಳ್ಳಲಿಲ್ಲ. ನೀವು ತೀರ್ಮಾನ ತೆಗೆದುಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ. ನಾನು ಕೆಲವೊಂದು ರೈತರಿಗೆ ಏನು ಅನ್ಯಾಯವಾಗುತ್ತಿದೆ ಎನ್ನುವುದರ ಬಗ್ಗೆ ನನಗೆ ಗೊತ್ತಿರುವಂತಹ ವಿಚಾರಗಳನ್ನು ರೈತರ ಪರವಾಗಿ ಹೇಳುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಿದೆಯೋ ಇಲ್ಲವೋ? ನಿಮ್ಮ ಅಧಿಕಾರಿಗಳು ಇರಲಿ, ಅಧಿಕಾರಿಗಳ ಸಮ್ಮುಖದಲ್ಲಿ ನಾನು ಹೇಳುತ್ತೇನೆ. ಅದರಲ್ಲಿ ಸತ್ಯಾಂಶವಿದ್ದರೆ, ನೀವು ರೈತರ ಪರವಾಗಿ ಹೇಳುವುದು ನಿಜವಿದೆ ಎನಿಸಿದರೆ ಅದನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಇಲ್ಲವೆಂದರೆ ಕೈಬಿಡಿ. ನೀವು ಮಾಡಬೇಕು, ಆದರೆ ನೀವು ಮಾಡುವುದಿಲ್ಲ. ನೀವು ಸುಮ್ಮನೆ ನಗುನಗುತ್ತಾ ಇದ್ದುಬಿಡುತ್ತೀರಿ. ನಾನು ನೋಡುತ್ತೇನೆ ನೀವು ಏನೋ ಮುಗಿಯಿತಲ್ಲವೆಂದು ಬಹಳ neglect ಆಗಿ ತೆಗೆದುಕೊಳ್ಳುತ್ತೀರಿ.

ಶ್ರೀ ಉಮೇಶ್ ವಿ. ಕತ್ತಿ :- ನಾನು ಆದಷ್ಟು ಬೇಗ ಈ ತಿಂಗಳ ಕೊನೆಯೊಳಗಾಗಿ ಒಂದು ಸಭೆಯನ್ನು ಮಾಡಿ ತಮಗೆ ಒಂದು ವರದಿಯನ್ನು ಮುಟ್ಟಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಆಯಿತು.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಗೊಬ್ಬರಕ್ಕೆ ಸಂಬಂಧಪ್ಟಂತೆ ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಬೀಜ, ಗೊಬ್ಬರ ಮತ್ತು ಅನೇಕ ಉಪಕರಣಗಳನ್ನು ಕೊಡುವುದಕ್ಕೆ ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಕೊಡುತ್ತಿದ್ದಾರೆ. ಆದರೆ ಇದು ಎಲ್ಲರಿಗೂ ಪ್ರಯೋಜನವಾಗುತ್ತಿಲ್ಲ. ಎಲ್ಲರಿಗೂ ಕೂಡ ಸಂಪರ್ಕ ಕೇಂದ್ರಗಳು ಏನಿವೆ ಅದರಿಂದ ಸಹಾಯಧನ ಸಿಗುವುದಿಲ್ಲ. ಕೇಂದ್ರ ಸರ್ಕಾರದವರು ಪ್ರತ್ಯೇಕವಾಗಿ ರೈತನಿಗೆ ಸಬ್ಸಿಡಿ ಕೊಡುವ ವಿಚಾರದಲ್ಲಿ ನೇರವಾಗಿ ಅವನ ಅಕೌಂಟ್‌ಗೆ ಹೋಗುವ ಹಾಗೆ ಒಂದು ಸ್ಕೀಂ ಮಾಡುತ್ತಿದ್ದಾರಲ್ಲ, ಅದೇ ರೀತಿ ಯಾವುದಾದರೂ ೨-೩ ಜಿಲ್ಲೆಯಲ್ಲಿ ಪೈಲಟ್ ಪ್ರಾಜೆಕ್ಟ್ ಇಟ್ಟುಕೊಂಡು, ನೀವು ಏನು ಸಹಾಯ ಮಾಡಬೇಕೆಂದು ಇದ್ದೀರಿ, ನೇರವಾಗಿ ರೈತರಿಗೆ ಸಹಾಯ ಮಾಡುವಂತಹ ಕಾರ್ಯಕ್ರಮವನ್ನು ಮಾಡಿ. ನೀವು ಐದು ಜನರಿಗೆ ಒಂದು ಟ್ರ್ಯಾಕ್ಟರ್ ಕೊಡುತ್ತೀರಿ, ಬೀಜ , ಗೊಬ್ಬರ ಕೊಡುತ್ತೀರಿ, ಅದನ್ನು ಕೆಲವರು ತೆಗೆದುಕೊಳ್ಳುತ್ತಾರೆ, ಕೆಲವರು ತೆಗೆದುಕೊಳ್ಳುವುದಿಲ್ಲ. ಕೆಲವರ ಹತ್ತಿರ ಹಣ ಇರುವುದಿಲ್ಲ, ನಾವು ಗೊಬ್ಬರದಲ್ಲಿ ಕೆಲವರು ವ್ಯವಸಾಯ ಮಾಡುತ್ತಾರೆ. ಯಾರಿಗೆ ಶಕ್ತಿ ಇದೆ ಅಂತಹವರಿಗೆ ಮಾತ್ರ ಅವಕಾಶವಿದೆ. ಬೇರೆ ಎಲ್ಲರಿಗೂ ಕೂಡ ಅವಕಾಶವಿಲ್ಲ. ಅದಕ್ಕೆ ಎಲ್ಲಾ ರೈತರಿಗೂ ಕೂಡ ಸರ್ಕಾರದ ಸೌಲಭ್ಯ ಮುಟ್ಟಿಸುವುದಕ್ಕೆ ಏನಾದರೂ ಕಾರ್ಯಕ್ರಮ ರೂಪಿಸುವುದಕ್ಕೆ ಸಾಧ್ಯವೇ?

ಶ್ರೀ ಉಮೇಶ್ ವಿ ಕತ್ತಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಡಿ.ಕೆ. ಶಿವಕುಮಾರ್‌ರವರು ಕೇಳಿದಂತಹ ಪ್ರಶ್ನೆಗೆ ಹೇಳುವುದಾದರೆ ಈಗಾಗಲೇ ಸರ್ಕಾರದಲ್ಲಿ ಕಾರ್ಯಕ್ರಮ ಜಾರಿಯಲ್ಲಿದೆ. ನಾನು ಅವರ ಪ್ರಶ್ನೆಗೆ ಉತ್ತರಿಸುತ್ತಾ, ಮೂರು ಕಾರ್ಯಕ್ರಮಗಳಿಗೆ ಸರ್ಕಾರದ ಸಹಾಯಧನ ನೀಡುವುದಕ್ಕೆ ಅವಕಾಶ ಇದೆ. ಅವುಗಳಲ್ಲಿ ಮೊದಲನೆಯದು ರೈತರು ಉಪಕರಣದ ಪೂರ್ಣ ಮೊತ್ತ ಪಾವತಿಸಿದಲ್ಲಿ ನೇರವಾಗಿ ರೈತರಿಗೆ ಸಹಾಯಧನ ಪಾವತಿಸುವುದು.

ಎರಡನೆಯದು ರೈತರು ಉಪಕರಣ ಪಡೆಯಲು ಬ್ಯಾಂಕ್ ಸಾಲ ಮಾಡಿದ್ದಲ್ಲಿ, ಸಾಲ ನೀಡಿದ ಬ್ಯಾಂಕ್ ಖಾತೆಗೆ ಸಹಾಯಧನವನ್ನು ಜಮೆ ಮಾಡುವುದು. ಮೂರನೆಯದಾಗಿ ರೈತ ವಂತಿಗೆ ಯನ್ನು ಮಾತ್ರ ಪಾವತಿಸಿ ಉಪಕರಣವನ್ನು ಖರೀದಿಸಿದಲ್ಲಿ ಸಹಾಯಧನವನ್ನು ಸಂಬಂಧಪಟ್ಟ ಸಂಸ್ಥೆಗೆ ನೀಡುವುದು. ರೈತ ಯಾವುದು ಮಾರ್ಕ್ ಮಾಡುತ್ತಾನೆ, ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರ ಮೈಸೂರು ಮತ್ತು ಇನ್ನೊಂದು ಜಿಲ್ಲೆಯನ್ನು ಪೈಲಟ್ ಪ್ರಾಜೆಕ್ಟ್‌ನಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡು ಕಾರ್ಯರೂಪಕ್ಕೆ ತಂದಿದೆ.

ಅದು success ಆದ ತಕ್ಷಣ ತೆಗೆದುಕೊಂಡಂಥ ಯಾವುದೇ ಪರಿಕರಗಳಿಗೆ ನೇರವಾಗಿ ಸಹಾಯಧನವನ್ನು ಕೊಡುವಂಥ ಕಾರ್ಯಕ್ರಮದ ಬಗ್ಗೆ ರಾಜ್ಯಸರ್ಕಾರ ಚಿಂತನೆ ಮಾಡುತ್ತಿದೆ. ಇದನ್ನು ಸಹ ಬರತಕ್ಕಂಥ ಕೆಲವೇ ದಿವಸಗಳಲ್ಲಿ ಜಾರಿಗೆ ತರಬೇಕಾಗುತ್ತದೆ. ತೋಟಗಾರಿಕೆ ಇಲಾಖೆಯಲ್ಲಿದ್ದಾಗ ಕೆಲವು ಬೋಗಸ್ ಆಗಿರುವಂಥದ್ದರ ಮೇಲೆ action ತೆಗೆದುಕೊಂಡಿರುವಂಥ ಉದಾಹರಣೆಗಳು ಇವೆ. ಆ ದೃಷ್ಟಿಯಿಂದ ಇದರ ಸಾಧಕ-ಬಾಧಕಗಳ ಬಗ್ಗೆ ವಿಚಾರ ಮಾಡಿ ರಾಜ್ಯ ಸರ್ಕಾರ ಇದಕ್ಕೆ ಒತ್ತು ಕೊಟ್ಟು ನೇರವಾಗಿ ರೈತರಿಗೆ ಸಹಾಯಧನ ಕೊಡುವಂಥ ಕಾರ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತದೆ.

2. ವಿಷಯ :ಕೊಬ್ಬರಿಗೆ ನೀಡುವ ಬೆಂಬಲ ಬೆಲೆಯನ್ನು ನಿಲ್ಲಿಸಿರುವ ಬಗ್ಗೆ:

ಶ್ರೀ ಕೆ.ಎಂ. ಶಿವಲಿಂಗೇಗೌಡ (ಶ್ರೀ ಎಂ.ಟಿ.ಕೃಷ್ಣಪ್ಪನವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ದೊಡ್ಡ ಮನಸ್ಸು ಮಾಡಿ ಕೊಬ್ಬರಿಗೆ ಸಬ್ಸಿಡಿಯನ್ನು ಕೊಡಲಾಗಿತ್ತು. ಈಗ ಕೊಬ್ಬರಿ ಬೆಲೆ ಸಂಪೂರ್ಣವಾಗಿ ಇಳಿಕೆಯಾಗಿದೆ. ರಾಜ್ಯಸರ್ಕಾರದ 700ರೂ. ಗಳ ಸಬ್ಸಿಡಿ ಹಣವನ್ನು ಏನು ಕೊಡುತ್ತಿದ್ದರು, ಅದನ್ನು ನಿಲ್ಲಿಸಿದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಮಂತ್ರಿಯವರು